**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 158 ಟಿಎನ್‌ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:30-07-2020.

**ಆದೇಶ**

ಕೇಂದ್ರೀಯ ಗೃಹ ಮಂತ್ರಾಲಯವು ಆದೇಶ ಸಂಖ್ಯೆ:40-3/2020-ಡಿಎಂ-ಐ(ಎ), ದಿನಾಂಕ:29.06.2020ರಲ್ಲಿ ಕಂಟೈನ್‌ಮೆಂಟ್ ವಲಯಗಳಲ್ಲಿನ ಲಾಕ್‌ಡೌನ್ ಅವಧಿಯನ್ನು ದಿನಾಂಕ:31.07.2020ರವರೆಗೆ ವಿಸ್ತರಿಸಿದೆ ಹಾಗೂ ತೆರವು-2 ಮಾರ್ಗಸೂಚಿಗಳನ್ನು ಹೊರಡಿಸಿದೆ. ತತ್ಪರಿಣಾಮವಾಗಿ, ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಕಂಇ 158 ಟಿಎನ್‌ಆರ್ 2020, ದಿನಾಂಕ:30.06.2020ರಲ್ಲಿ ತೆರವು-2ಕ್ಕೆ ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಇವುಗಳು ದಿನಾಂಕ:31.07.2020ರವರೆಗೆ ಜಾರಿಯಲ್ಲಿರುತ್ತದೆ.

ಕೇಂದ್ರಿಯ ಗೃಹ ಮಂತ್ರಾಲಯವು ಆದೇಶ ಸಂಖ್ಯೆ:40-3/2020-ಡಿಎಂ-ಐ(ಎ), ದಿನಾಂಕ:29.07.2020ರಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ನಿರ್ದೇಶನದನ್ವಯ ಕಂಟೈನ್‌ಮೆಂಟ್ ವಲಯಗಳಲ್ಲಿ ಲಾಕ್‌ಡೌನ್ ಅವಧಿಯನ್ನು ವಿಸ್ತರಿಸಲು ಹಾಗೂ ಕಂಟೈನ್‌ಮೆಂಟ್ ವಲಯಗಳ ಹೊರಗಿನ ಪ್ರದೇಶಗಳಲ್ಲಿ ಹೆಚ್ಚಿನ ಚಟುವಟಿಕೆಗಳನ್ನು ಪುನಃ ಆರಂಭಿಸಲು ತೆರವು-3 ಮಾರ್ಗಸೂಚಿಗಳನ್ನು ಹೊರಡಿಸಿದೆ. ಇವುಗಳು ದಿನಾಂಕ:31.08.2020ರವರೆಗೆ ಜಾರಿಯಲ್ಲಿರುತ್ತದೆ.

ವಿಪತ್ತು ನಿರ್ವಹಣಾ ಕಾಯ್ದೆ, 2005ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷನಾಗಿ ಈ ಕೆಳಗೆ ಸಹಿ ಮಾಡಿರುವ ನಾನು ಅನುಬಂಧದಲ್ಲಿರುವಂತೆ ತೆರವು-3ರ ಮಾರ್ಗಸೂಚಿಗಳನ್ನು ಹೊರಡಿಸಿರುತ್ತೇನೆ. ಈ ಮಾರ್ಗಸೂಚಿಗಳು ದಿನಾಂಕ:01.08.2020 ರಿಂದ ಜಾರಿಗೊಂಡು ದಿನಾಂಕ:31.08.2020ರವರೆಗೆ ಚಾಲ್ತಿಯಲ್ಲಿರುತ್ತದೆ. ಇದನ್ನು ಆಯುಕ್ತರು ಬಿಬಿಎಂಪಿ, ಪೊಲೀಸ್ ಆಯುಕ್ತರು, ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಇತರೆ ಇಲಾಖಾ ಮುಖ್ಯಸ್ಥರುಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸತಕ್ಕದ್ದು.

30/7/20

**(ಟಿ.ಎಂ. ವಿಜಯ್ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ
ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಅಧ್ಯಕ್ಷರು

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.

## ತೆರವು-3ರ (Unlock-3) ಮಾರ್ಗಸೂಚಿಗಳು

(ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 158 ಟಿಎನ್‌ಆರ್ 2020, ದಿ:30.07.2020 ರನ್ವಯ)

**1. ಕಂಟೈನ್‌ಮೆಂಟ್ ವಲಯಗಳನ್ನು ಹೊರತುಪಡಿಸಿದ ಪ್ರದೇಶಗಳಲ್ಲಿ ತೆರವು-3ರ ಅವಧಿಯಲ್ಲಿ ಅನುಮತಿಸಲಾದ ಚಟುವಟಿಕೆಗಳು:**

ಕಂಟೈನ್‌ಮೆಂಟ್ ವಲಯಗಳ ಹೊರಗಿನ ಪ್ರದೇಶಗಳಲ್ಲಿ ಈ ಕೆಳಗಿನವುಗಳನ್ನು ಹೊರತುಪಡಿಸಿ, ಎಲ್ಲಾ ಚಟುವಟಿಕೆಗಳನ್ನು ಅನುಮತಿಸಲಾಗುವುದು.

(i) ಶಾಲೆಗಳು, ಕಾಲೇಜುಗಳು, ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು 31ನೇ ಆಗಸ್ಟ 2020ರವರೆಗೆ ಮುಚ್ಚಲ್ಪಡುತ್ತವೆ. ಆನ್‌ಲೈನ್/ದೂರಶಿಕ್ಷಣ ಕಲಿಕೆಗಳಿಗೆ ಅನುಮತಿಸುವುದನ್ನು ಮುಂದುವರಿಸಲಾಗುವುದು ಮತ್ತು ಪ್ರೋತ್ಸಾಹಿಸಲಾಗುವುದು.

(ii) ಸಿನೆಮಾ ಮಂದಿರಗಳು, ಈಜುಕೊಳಗಳು, ಮನೋರಂಜನಾ ಉದ್ಯಾನವನಗಳು, ಚಿತ್ರಮಂದಿರಗಳು, ಬಾರ್‌ಗಳು, ಸಭಾಂಗಣಗಳು, ಅಸೆಂಬ್ಲಿ ಹಾಲ್‌ಗಳು ಮತ್ತು ಅಂತಹುದೇ ಸ್ಥಳಗಳು.

ಯೋಗ ಕೇಂದ್ರಗಳನ್ನು ಮತ್ತು ಜಿಮ್ನಾಷಿಯಂಗಳನ್ನು ತೆರೆಯಲು ದಿನಾಂಕ:05.08.2020ರಿಂದ ಅನುಮತಿಸಲಾಗುವುದು. ಈ ಸಂಬಂಧ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ ಮತ್ತು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಪ್ರಮಾಣಿತ ಕಾರ್ಯ ವಿಧಾನ (SOP)ಯನ್ನು ಹೊರಡಿಸಲಾಗುವುದು.

(iii) ಎಂಎಚ್‌ಎ ಅನುಮತಿಸಿದ ಪ್ರಯಾಣಿಕರ ಅಂತರ-ರಾಷ್ಟ್ರೀಯ ವಿಮಾನ ಪ್ರಯಾಣ ಹೊರತುಪಡಿಸಿ

(iv) ಮೆಟ್ರೋ ರೈಲು.

(v) ಸಾಮಾಜಿಕ / ರಾಜಕೀಯ / ಕ್ರೀಡೆ / ಮನೋರಂಜನೆ / ಶೈಕ್ಷಣಿಕ / ಸಾಂಸ್ಕೃತಿಕ / ಧಾರ್ಮಿಕ ಕಾರ್ಯಗಳು ಮತ್ತು ಇತರೆ ಬೃಹತ್ ಸಭೆಗಳು.

ಈ ಮೇಲಿನ ಕಾರ್ಯಚಟುವಟಿಕೆಗಳನ್ನು ಪುನರಾರಂಭಿಸುವುದಕ್ಕೆ ದಿನಾಂಕವನ್ನು ಭಾರತ ಸರ್ಕಾರವು ಪ್ರತ್ಯೇಕವಾಗಿ ನಿರ್ಣಯಿಸಬಹುದು ಮತ್ತು ಭಾರತ ಸರ್ಕಾರದ ಸಂಬಂಧಪಟ್ಟ ಮಂತ್ರಾಲಯಗಳಿಂದ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಹಾಗೂ ಕೋವಿಡ್-19 ಹರಡುವಿಕೆಯನ್ನು ತಡೆಗಟ್ಟಲು ಅಗತ್ಯ ಪ್ರಮಾಣಿತ ಕಾರ್ಯ ವಿಧಾನ (SOP)ಯನ್ನು ಹೊರಡಿಸತಕ್ಕದ್ದು.

**2. ಸ್ವಾತಂತ್ರ್ಯ ದಿನಾಚರಣೆ:**

ಸ್ವಾತಂತ್ರ್ಯ ದಿನಾಚರಣೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜಿಲ್ಲೆಗಳು, ಉಪ ವಿಭಾಗಗಳು, ತಾಲ್ಲೂಕುಗಳು, ಮುನ್ಸಿಪಲ್ ಮತ್ತು ಪಂಚಾಯತ್ ವ್ಯಾಪ್ತಿಯಲ್ಲಿ ಹಾಗೂ ಮನೆಗಳಲ್ಲೂ ಆಚರಿಸಲು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಮುಖಾಂತರ ಮತ್ತು ಇತರೆ ಆರೋಗ್ಯ ಶಿಷ್ಟಾಚಾರಗಳನ್ನು ಪಾಲಿಸುವುದರೊಂದಿಗೆ (**ಉದಾ:-** ಮುಖಗವಸನ್ನು ಧರಿಸುವಂತಹ) ಅನುಮತಿಸಲಾಗುವುದು. ಈ ಸಂಬಂಧ ಭಾರತ ಸರ್ಕಾರದ ಗೃಹ ಮಂತ್ರಾಲಯವು ಪತ್ರ ಸಂಖ್ಯೆ: 2/5/2020-Public, ದಿನಾಂಕ:20.07.2020ರಲ್ಲಿ ಹೊರಡಿಸಿರುವ ಸೂಚನೆಗಳನ್ನು ಪಾಲಿಸತಕ್ಕದ್ದು. ಗೃಹ ಮಂತ್ರಾಲಯದ ಪತ್ರವನ್ನು ಅನುಬಂಧ-IIIರಲ್ಲಿ ಇರಿಸಿದೆ.

**3. COVID-19 ನಿರ್ವಹಣೆಗೆ ರಾಷ್ಟ್ರೀಯ ನಿರ್ದೇಶನಗಳು:**

COVID-19 ನಿರ್ವಹಣೆಯ ಸಂಬಂಧ ರಾಷ್ಟ್ರೀಯ ನಿರ್ದೇಶನಗಳನ್ನು **ಅನುಬಂಧ-1**ರಲ್ಲಿ ನಿರ್ದಿಷ್ಟಪಡಿಸಿದಂತೆ ರಾಜ್ಯಾದ್ಯಂತ ಮುಂದುವರಿಸತಕ್ಕದ್ದು.

4. **ಕಂಟೈನ್‌ಮೆಂಟ್ ವಲಯಗಳಿಗೆ ಸೀಮಿತವಾದ ಲಾಕ್‌ಡೌನ್:**

(i) ಕಂಟೈನ್‌ಮೆಂಟ್ ವಲಯಗಳಲ್ಲಿನ ಲಾಕ್‌ಡೌನ್ ದಿನಾಂಕ:31.08.2020ರವರೆಗೆ ಮುಂದುವರೆಯುತ್ತದೆ.

(ii) ಸೋಂಕಿನ ಪ್ರಸರಣ ಸರಪಳಿಯನ್ನು ಪರಿಣಾಮಕಾರಿಯಾಗಿ ಮುರಿಯುವ ಉದ್ದೇಶದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ ಹಾಗೂ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳು ಹೊರಡಿಸುವ ಮಾರ್ಗಸೂಚಿಯನ್ನು ಪರಿಗಣನೆಗೆ ತೆಗೆದುಕೊಂಡ ನಂತರ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಜಿಲ್ಲಾ ಪ್ರಾಧಿಕಾರಗಳು ಕಂಟೈನ್‌ಮೆಂಟ್ ವಲಯಗಳನ್ನು ಗುರುತಿಸುತ್ತವೆ. ಈ ಕಂಟೈನ್‌ಮೆಂಟ್ ವಲಯಗಳನ್ನು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಸಂಬಂಧಿಸಿದ ಇಲಾಖೆಗಳು ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಿ, ಸದರಿ ಮಾಹಿತಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ (MoHFW)ದೊಂದಿಗೆ ಹಂಚಿಕೊಳ್ಳುವುದು.

(iii) ಕಂಟೈನ್‌ಮೆಂಟ್ ವಲಯಗಳಲ್ಲಿ, ಅಗತ್ಯ ಚಟುವಟಿಕೆಗಳಿಗೆ ಮಾತ್ರ ಅವಕಾಶ ಕಲ್ಪಿಸತಕ್ಕದ್ದು. ವೈದ್ಯಕೀಯ ತುರ್ತುಸ್ಥಿತಿಗಳನ್ನು ಹೊರತುಪಡಿಸಿ ಮತ್ತು ಅಗತ್ಯ ಸರಕು ಮತ್ತು ಸೇವೆಗಳ ಪೂರೈಕೆಯನ್ನು ಕಾಪಾಡಿಕೊಳ್ಳಲು ಈ ವಲಯಗಳಲ್ಲಿ ಅಥವಾ ಹೊರಗೆ ವ್ಯಕ್ತಿಗಳ ಚಲನೆ ಇಲ್ಲ ಎಂದು ಖಚಿತಪಡಿಸಿಕೊಳ್ಳಲು ಕಟ್ಟುನಿಟ್ಟಾದ ಪರಿಧಿಯ (Strict perimeter) ನಿಯಂತ್ರಣ ಇರತಕ್ಕದ್ದು. ಕಂಟೈನ್‌ಮೆಂಟ್ ವಲಯಗಳಲ್ಲಿ ಅಗತ್ಯವಿರುವಂತೆ ತೀವ್ರವಾದ ಸಂಪರ್ಕ ಪತ್ತೆಹಚ್ಚುವಿಕೆ, ಮನೆ-ಮನೆಗೆ ಕಣ್ಗಾವಲು ಮತ್ತು ಇತರ ಕ್ಲಿನಿಕಲ್ ಮಧ್ಯಸ್ಥಿಕೆಗಳು ಇರತಕ್ಕದ್ದು. ಈ ಉದ್ದೇಶಕ್ಕಾಗಿ MoHFWನ ಮಾರ್ಗಸೂಚಿಗಳನ್ನು ಹಾಗೂ ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾರ್ಗಸೂಚಿಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸತಕ್ಕದ್ದು.

(iv) ಕಂಟೈನ್‌ಮೆಂಟ್ ವಲಯಗಳಲ್ಲಿನ ಚಟುವಟಿಕೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಜಿಲ್ಲಾ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡತಕ್ಕದ್ದು, ಮತ್ತು ಈ ವಲಯಗಳಲ್ಲಿನ ಕಂಟೈನ್‌ಮೆಂಟ್ ಕ್ರಮಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರತಕ್ಕದ್ದು.

(v) ಹೊಸ ಪ್ರಕರಣಗಳು ಸಂಭವಿಸುವ ಸಾಧ್ಯತೆಯಿರುವ ಕಂಟೈನ್‌ಮೆಂಟ್ ವಲಯಗಳ ಹೊರಗಿನ ಬಫರ್ ವಲಯಗಳನ್ನು ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಜಿಲ್ಲಾ ಪ್ರಾಧಿಕಾರಗಳು ಗುರುತಿಸಬಹುದು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಜಿಲ್ಲಾ ಪ್ರಾಧಿಕಾರಗಳು ಬಫರ್ ವಲಯದೊಳಗೆ ಅಗತ್ಯವೆಂದು ಪರಿಗಣಿಸಲಾದ ನಿರ್ಬಂಧಗಳನ್ನು ವಿಧಿಸಬಹುದು.

5. **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಜಿಲ್ಲೆಗಳು ಪರಿಸ್ಥಿತಿಯ ನಿರ್ಧರಣೆಯ ಆಧಾರದ ಮೇಲೆ, ಕಂಟೈನ್ಮೆಂಟ್ ವಲಯಗಳ ಹೊರಗೆ ಕೆಲವು ಚಟುವಟಿಕೆಗಳನ್ನು ನಿಷೇಧಿಸಬಹುದು ಅಥವಾ ಅಗತ್ಯವೆಂದು ಪರಿಗಣಿಸುವಂತಹ ನಿರ್ಬಂಧಗಳನ್ನು ವಿಧಿಸಬಹುದು:**

ರಾಜ್ಯದೊಳಗೆ ಮತ್ತು ರಾಜ್ಯದ ಹೊರಗೆ ವ್ಯಕ್ತಿಗಳ ಹಾಗೂ ಸರಕುಗಳ ಚಲನೆಗೆ ಯಾವುದೇ ನಿರ್ಬಂಧವಿರತಕ್ಕದ್ದಲ್ಲ. ಇಂತಹ ಚಟುವಟಿಕೆಗಳಿಗೆ ಪ್ರತ್ಯೇಕ ಅನುಮತಿ / ಅನುಮೋದನೆ / ಇ-ಪರ್ಮಿಟ್ ಅಗತ್ಯವಿರುವುದಿಲ್ಲ. ಅದಾಗ್ಯೂ, ಇತರೇ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ಆಗಮಿಸುವ ವ್ಯಕ್ತಿಗಳ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)ಯಿಂದ ಹೊರಡಿಸಿರುವ ಮಾರ್ಗಸೂಚಿಗಳು/ಎಸ್‌ಒಪಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

6. **ಎಸ್‌ಒಪಿ.ಗಳ ಅನುಸಾರ ವ್ಯಕ್ತಿಗಳ ಚಲನೆ:**

ಪ್ರಯಾಣಿಕರ ರೈಲುಗಳು ಮತ್ತು *"ಶ್ರಮಿಕ್"* ವಿಶೇಷ ರೈಲುಗಳ ಸಂಚಾರ; ದೇಶೀಯ ಪ್ರಯಾಣಿಕರ ವಿಮಾನ ಪ್ರಯಾಣ; ದೇಶದ ಹೊರಗೆ ಸಿಲುಕಿರುವ ಭಾರತೀಯ ಪ್ರಜೆಗಳ ಚಲನೆ ಮತ್ತು ವಿದೇಶಕ್ಕೆ



ಸಹಿ

ಪ್ರಯಾಣಿಸಲು ನಿರ್ದಿಷ್ಟ ವ್ಯಕ್ತಿಗಳ ಚಲನೆ; ವಿದೇಶಿ ಪ್ರಜೆಗಳ ಸ್ಥಳಾಂತರಿಸುವಿಕೆ; ಮತ್ತು ಭಾರತೀಯ ಕಡಲತೀರದ ಸೈನ್-ಇನ್ ಮತ್ತು ಸೈನ್ ಆಫ್ ಅನ್ನು ಹೊರಡಿಸಲಾದ ಎಸ್‌ಒಪಿಗಳ ಅನುಸಾರ ನಿಯಂತ್ರಿಸತಕ್ಕದ್ದು.

**7. ದುರ್ಬಲ ವ್ಯಕ್ತಿಗಳ ರಕ್ಷಣೆ:**

65 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳು, ಸಹ-ಅಸ್ವಸ್ಥತೆ ಹೊಂದಿರುವ ವ್ಯಕ್ತಿಗಳು, ಗರ್ಭಿಣಿಯರು ಮತ್ತು 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಅಗತ್ಯ ಮತ್ತು ಆರೋಗ್ಯ ಉದ್ದೇಶಗಳನ್ನು ಹೊರತುಪಡಿಸಿ ಮನೆಯಲ್ಲಿಯೇ ಇರಲು ಸಲಹೆ ನೀಡಲಾಗಿದೆ.

**8. *ಆರೋಗ್ಯ ಸೇತು* ಬಳಕೆ:**

(i) ಸೋಂಕಿನ ಸಂಭವನೀಯ ಅಪಾಯವನ್ನು ಮೊದಲೇ ಗುರುತಿಸಲು *ಆರೋಗ್ಯ ಸೇತು* ಅನುವು ಮಾಡಿಕೊಡುತ್ತದೆ ಮತ್ತು ಇದು ವ್ಯಕ್ತಿಗಳು ಹಾಗೂ ಸಮುದಾಯಕ್ಕೆ ರಕ್ಷಾಕವಚವಾಗಿ ಕಾರ್ಯನಿರ್ವಹಿಸುತ್ತದೆ.

(ii) ಉದ್ಯೋಗದಾತರು, ಕಛೇರಿಗಳು ಮತ್ತು ಕರ್ತವ್ಯ ಸ್ಥಳಗಳಲ್ಲಿ ಸುರಕ್ಷತೆಯನ್ನು ಖಾತರಿಪಡಿಸುವ ಉದ್ದೇಶದಿಂದ, ಉತ್ತಮ ಪ್ರಯತ್ನದ ಆಧಾರದ ಮೇಲೆ *ಆರೋಗ್ಯ ಸೇತುವನ್ನು* ಎಲ್ಲಾ ಉದ್ಯೋಗಿಗಳು ಹೊಂದುವಂತಹ ಮೊಬೈಲ್ ಫೋನ್‌ಗಳಲ್ಲಿ ಹೊಂದಿದ್ದಾರೆಯೇ ಎಂದು ಖಚಿತಪಡಿಸಿಕೊಳ್ಳಬೇಕು.

(iii) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ / ಜಿಲ್ಲಾ ಪ್ರಾಧಿಕಾರಗಳು ಪ್ರತಿಯೊಬ್ಬರು *ಆರೋಗ್ಯ ಸೇತು* ಹೊಂದಾಣಿಕೆಯ ಮೊಬೈಲ್ ಫೋನ್ ಗಳಲ್ಲಿ *ಆರೋಗ್ಯ ಸೇತು* ಅಪ್ಲಿಕೇಶನ್ ಅನ್ನು ಅಳವಡಿಸಲು ಮತ್ತು ಅಪ್ಲಿಕೇಶನ್‌ನಲ್ಲಿ ನಿಯಮಿತವಾಗಿ ಅವರ ಆರೋಗ್ಯ ಸ್ಥಿತಿಯನ್ನು ನವೀಕರಿಸಲು ವ್ಯಕ್ತಿಗಳಿಗೆ ಸಲಹೆ ನೀಡಬಹುದು. ಇದು ಅಪಾಯದಲ್ಲಿರುವ ವ್ಯಕ್ತಿಗಳಿಗೆ ಸಕಾಲದಲ್ಲಿ ವೈದ್ಯಕೀಯ ನೆರವು ನೀಡಲು ಸಹಕಾರಿಯಾಗುತ್ತದೆ.

**9. ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು:**

(i) ವಿಪತ್ತು ನಿರ್ವಹಣಾ ಕಾಯ್ದೆ-2005ರ ಅಡಿಯಲ್ಲಿ ಹೊರಡಿಸಲಾದ ಈ ಮಾರ್ಗಸೂಚಿಗಳನ್ನು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಜಿಲ್ಲಾಧಿಕಾರಿಗಳು ಯಾವುದೇ ರೀತಿಯಲ್ಲಿ ದುರ್ಬಲಗೊಳಿಸತಕ್ಕದ್ದಲ್ಲ.

(ii) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಜಿಲ್ಲಾಧಿಕಾರಿಗಳು ಮೇಲಿನ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸತಕ್ಕದ್ದು.

**10. ದಂಡನೀಯ ಉಪಬಂಧಗಳು.**

ಕೋವಿಡ್-19 ನಿರ್ವಹಣೆಯ ಲಾಕ್‌ಡೌನ್ ಕ್ರಮಗಳನ್ನು ರಾಷ್ಟ್ರೀಯ ನಿರ್ದೇಶನಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು, ವಿಪತ್ತು ನಿರ್ವಹಣಾ ಅಧಿನಿಯಮ 2005ರ ಸೆಕ್ಷನ್ 51 ರಿಂದ 60ರ ಉಪಬಂಧಗಳು, ಅಲ್ಲದೇ ಭಾರತೀಯ ದಂಡ ಸಂಹಿತೆ ಸೆಕ್ಷನ್ 188ರ ಅಡಿಯಲ್ಲಿನ ಕಾನೂನು ಕ್ರಮ ಮತ್ತು ಅನ್ವಯವಾಗಬಹುದಾದ ಇತರೆ ಕಾನೂನು ಉಪಬಂಧಗಳ ಮೇರೆಗೆ ಅವರ ವಿರುದ್ಧ ಕ್ರಮ ಜರುಗಿಸಬಹುದು. ಈ ದಂಡನೀಯ ಉಪಬಂಧಗಳ ಆಂಗ್ಲಭಾಷೆಯಲ್ಲಿನ ಉದ್ಧೃತ ಭಾಗವನ್ನು ಅನುಬಂಧ-II ರಲ್ಲಿರಿಸಿದೆ.

ಟಿಎಂವಿಜಯಭಾಸ್ಕರ 30/7/20

**(ಟಿ.ಎಂ ವಿಜಯ್ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಅಧ್ಯಕ್ಷರು

# ಅನುಬಂಧ-1

## ಕೋವಿಡ್-19 ನಿರ್ವಹಣೆಗೆ ರಾಷ್ಟ್ರೀಯ ನಿರ್ದೇಶನಗಳು

1. **ಮುಖದ ಹೊದಿಕೆ:** ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ, ಕೆಲಸದ ಸ್ಥಳಗಳಲ್ಲಿ ಮತ್ತು ಪ್ರಯಾಣದ ಸಮಯದಲ್ಲಿ ಮುಖದ ಹೊದಿಕೆಯನ್ನು ಧರಿಸುವುದು ಕಡ್ಡಾಯವಾಗಿದೆ. ಅಗತ್ಯಾನುಸಾರ ಮುಖದ ಹೊದಿಕೆಯನ್ನು ಧರಿಸದಿದ್ದಲ್ಲಿ ನಗರ ಪ್ರದೇಶಗಳಲ್ಲಿ ರೂ.200/- ಮತ್ತು ಇನ್ನುಳಿದ ಪ್ರದೇಶಗಳಲ್ಲಿ ರೂ.100/-ದಂಡ ವಿಧಿಸತಕ್ಕದ್ದು.

2. **ಸಾಮಾಜಿಕ ಅಂತರ:** ಪ್ರತಿಯೊಬ್ಬರೂ ಸಾರ್ವಜನಿಕ ಸ್ಥಳಗಳಲ್ಲಿ ಕನಿಷ್ಟ 6 ಅಡಿ ಅಂತರವನ್ನು (2 ಗಜ ಅಂತರ) ಕಾಯ್ದುಕೊಳ್ಳಬೇಕು.

   ಗ್ರಾಹಕರಲ್ಲಿ ದೈಹಿಕ ಅಂತರ ಇರುವುದನ್ನು ಅಂಗಡಿಗಳು ಖಚಿತಪಡಿಸಿಕೊಳ್ಳತಕ್ಕದ್ದು.

3. **ಗುಂಪುಗೂಡುವಿಕೆ:** ಬೃಹತ್ ಸಾರ್ವಜನಿಕ ಸಭೆಗಳು/ಒಟ್ಟು ಗೂಡುವಿಕೆ ನಿಷೇಧವನ್ನು ಮುಂದುವರೆಸಲಾಗಿದೆ.

   **ಮದುವೆ ಸಂಬಂಧಿತ ಕೂಟಗಳು:** ಅತಿಥಿಗಳ ಸಂಖ್ಯೆ 50ಕ್ಕೆ ಮೀರಿರಬಾರದು.

   **ಶವ ಸಂಸ್ಕಾರ/ಅಂತಿಮ ವಿಧಿ ಸಂಬಂಧಿತ ಕಾರ್ಯಗಳು:** ವ್ಯಕ್ತಿಗಳ ಸಂಖ್ಯೆ 20ಕ್ಕೆ ಮೀರಿರಬಾರದು.

4. ಸ್ಥಳೀಯ ಪ್ರಾಧಿಕಾರಗಳು, ಅದರ ಕಾನೂನು, ನಿಯಮ ಮತ್ತು ನಿಬಂಧನೆಗಳಲ್ಲಿ ತಿಳಿಸಿರುವಂತೆ ಸಾರ್ವಜನಿಕ ಸ್ಥಳಗಳಲ್ಲಿ ಉಗಿಯುವುದು ದಂಡನಾರ್ಹ ಶಿಕ್ಷೆಯಾಗಿರುತ್ತದೆ.

5. ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ, ಪಾನ್, ಗುಟ್ಕಾ, ತಂಬಾಕು ಇತ್ಯಾದಿಗಳ ಬಳಕೆಯನ್ನು ನಿಷೇಧಿಸಿದೆ.

**ಕೆಲಸದ ಸ್ಥಳಗಳಲ್ಲಿ ಹೆಚ್ಚುವರಿ ನಿರ್ದೇಶನಗಳು:**

6. **ಮನೆಯಿಂದ ಕೆಲಸ (Work from Home-WfH):** ಸಾಧ್ಯವಾದಷ್ಟು ಮಟ್ಟಿಗೆ ಮನೆಯಿಂದಲೇ ಕೆಲಸ ಮಾಡುವ ಪದ್ಧತಿಯನ್ನು ಅನುಸರಿಸಬೇಕು.

7. **ಕೆಲಸದಲ್ಲಿ ಪಾಳಿಯ ಪದ್ಧತಿ/ವ್ಯವಹಾರ ಸಮಯ:** ಕಚೇರಿಗಳಲ್ಲಿ, ಕೆಲಸದ ಸ್ಥಳಗಳಲ್ಲಿ, ಅಂಗಡಿಗಳಲ್ಲಿ, ಮಾರುಕಟ್ಟೆಗಳಲ್ಲಿ ಮತ್ತು ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಕೆಲಸ/ವ್ಯವಹಾರದ ಸಮಯದಲ್ಲಿ ಪಾಳಿಯ ಪದ್ಧತಿಯನ್ನು ಅನುಸರಿಸುವುದು.

8. **ಸ್ಕ್ರೀನಿಂಗ್ ಮತ್ತು ನೈರ್ಮಲ್ಯ:** ಎಲ್ಲಾ ಸಾಮಾನ್ಯ ಪ್ರದೇಶಗಳಲ್ಲಿ, ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿ ಥರ್ಮಲ್ ಸ್ಕ್ಯಾನಿಂಗ್, ಕೈ ತೊಳೆಯುವುದಕ್ಕೆ ಮತ್ತು ಸ್ಯಾನಿಟೈಸರ್ ಗೆ ಅವಕಾಶ ಕಲ್ಪಿಸುವುದು.

9. **ನಿಯಮಿತ ಸ್ಯಾನಿಟೈಸೇಷನ್:** ಕೆಲಸದ ಸಂಪೂರ್ಣ ಆವರಣ, ಸಾಮಾನ್ಯ ಸೌಲಭ್ಯಗಳು ಮತ್ತು ಮಾನವ ಸಂಪರ್ಕಕ್ಕೆ ಬರುವ ಎಲ್ಲಾ ಅಂಶಗಳಿಗೆ ಆಗಾಗ್ಗೆ ನೈರ್ಮಲ್ಯೀಕರಣ ಮಾಡತಕ್ಕದ್ದು. (**ಉದಾ:**-ಬಾಗಿಲ ಹಿಡಿಕೆಗಳು, ಇತ್ಯಾದಿಗಳು) ಇದನ್ನು ಕೆಲಸದ ಪಾಳಿಯ ಮಧ್ಯದಲ್ಲಿ ಸಹ ಖಾತರಿಪಡಿಸಿಕೊಳ್ಳುವುದು.

10. **ಸಾಮಾಜಿಕ ಅಂತರ:** ಕೆಲಸದ ಸ್ಥಳದಲ್ಲಿ ವ್ಯಕ್ತಿಗಳ ನಡುವೆ, ಪಾಳಿಗಳ ನಡುವೆ, ಊಟದ ವಿರಾಮ ಮೊದಲಾದವುಗಳಲ್ಲಿ ಎಲ್ಲಾ ವ್ಯಕ್ತಿಗಳು ಸಾಕಷ್ಟು ಅಂತರವನ್ನು ಕಾಯ್ದುಕೊಂಡಿರುವ ಬಗ್ಗೆ ಮೇಲ್ವಿಚಾರಕರು ಖಾತರಿಪಡಿಸಿಕೊಳ್ಳುವುದು.

ಟಿ.ಎಂ.ವಿಜಯ್ ಭಾಸ್ಕರ್ 30/7/20

**(ಟಿ. ಎಂ ವಿಜಯ್ ಭಾಸ್ಕರ್)**

ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ
ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಅಧ್ಯಕ್ಷರು

ANNEXURE - III

MOST IMMEDIATE

No.2/5/2020-Public
Government of India/Bharat Sarkar
Ministry of Home Affairs/Grih Mantralaya
***

North Block, New Delhi
Dated, the 20th July, 2020

To

The Chief Secretaries of
All State Governments and Administrators of all Union Territory Administrations

Sub: INDEPENDENCE DAY CELEBRATIONS ON 15th AUGUST, 2020

Sir/Madam,

Every year, the Independence Day is celebrated with grandeur, gaiety, fervour and enthusiasm. This year also, the Independence Day will be celebrated in a manner befitting the occasion. However, in view of spread of Covid-19 pandemic, while organizing various programmes or activities for the Independence Day celebrations, it is imperative to follow certain preventive measures such as maintaining social distancing, wearing of masks, proper sanitization, avoiding large congregations, protecting vulnerable persons, etc.; and follow all guidelines related to Covid-19 issued by the Ministry of Home Affairs and Ministry of Health & Family Welfare. Therefore, all programmes should be organized in a way that large congregation of people is avoided and technology is used in a best possible manner for celebration befitting the occasion. The events organized could be web-cast in order to reach out people at large, who are not able to participate.

2. Keeping the above limitations and precautionary steps in view, the Independence Day Celebrations in Delhi shall consist of the following:-

(i) The Ceremony at Red Fort consisting of the presentation of a Guard of Honour by the Armed Forces and the Delhi Police to the Prime Minister (Pradhan Mantri), unfurling of the National Flag accompanied by playing of the National Anthem and firing of 21-gun salute, speech by the Prime Minister, singing of the National Anthem immediately after PM's speech, and release of tri-coloured balloons at the end.

(ii) "At Home" reception at Rashtrapati Bhawan.

3. For celebrations of the Independence Day at different levels in the States/UTs, certain guidelines have been prescribed, as enumerated in the succeeding paragraphs:

4. The functions in the State/Union Territories on this day may consist of the following:-

**STATE LEVEL:**

(i) A ceremony in the morning (after 9.00 AM) in the State/Union Territory Capitals consisting of unfurling of the National Flag by the Chief Minister; playing of the National Anthem; presentation of Guard of Honour by the Police including Para-Military Forces, Home Guards, NCC, Scouts, etc; speech by the Chief Minister; and singing of the National Anthem.

(ii) In view of Covid-19 pandemic, large congregation in the ceremony be avoided. It is imperative that social distancing norms, wearing masks, etc., are followed.

(iii) It would also be appropriate that Covid-19 warriors like doctors, health workers, sanitation workers, etc., are invited in the ceremony as a recognition of their noble service in fight against Covid-19 Pandemic. Some persons cured from Covid-19 infection may also be invited.

**DISTRICT LEVEL:**

(i) A similar ceremony as mentioned above in the morning (after 9.00 AM) at the District level which may, inter-alia, consist of unfurling of the National Flag by a Minister/Commissioner/District Magistrate; playing of the National Anthem; parade by State Police personnel, Home Guards/NCC, Scouts; speech by the Minister/ Commissioner/ District Magistrate explaining the significance of 15th August and exhorting the audience to work for the unity and integrity of the country; and singing of the National Anthem.

(ii) In view of Covid-19 pandemic, large congregation in the ceremony be avoided. It is imperative that social distancing norms, wearing masks, etc., are followed.

(iii) It would also be appropriate that Covid-19 warriors like doctors, health workers, sanitation workers, etc., are invited in the ceremony as a

recognition of their noble service in fight against Covid-19 Pandemic. Some persons cured from Covid-19 infection may also be invited.

SUB-DIVISIONAL LEVEL/BLOCK LEVEL:

(i) Ceremonial hoisting of the National Flag by a Minister/Sub-Divisional Magistrate (after 9.00 AM), playing of the National Anthem; speech by the dignitary explaining the significance of 15th August and exhorting the audience to work for the unity and integrity of the country; unfurling of the National Flag; singing of the National Anthem, etc.

(ii) In view of Covid-19 pandemic, large congregation in the ceremony be avoided. It is imperative that social distancing norms, wearing masks, etc., are followed.

(iii) It would also be appropriate that Covid-19 warriors like doctors, health workers, sanitation workers, etc., are invited in the ceremony as a recognition of their noble service in fight against Covid-19 Pandemic. Some persons cured from Covid-19 infection may also be invited.

PANCHAYAT HEADQUARTERS/BIGGER VILLAGES:

(i) Ceremonial hoisting of the National Flag by the Sarpanch/Village Head-man (after 9.00 AM), playing of the National Anthem; speech by the Sarpanch/ Village Head-man explaining the significance of 15th August and exhorting the audience to work for the unity and integrity of the country; singing of the National Anthem etc.

(ii) In view of Covid-19 pandemic, large congregation in the ceremony be avoided. It is imperative that social distancing norms, wearing masks, etc., are followed.

(iii) It would also be appropriate that Covid-19 warriors like doctors, health workers, sanitation workers, etc., are invited in the ceremony as a recognition of their noble service in fight against Covid-19 Pandemic. Some persons cured from Covid-19 infection may also be invited.

5. It may be ensured that National Flag is hoisted at all State Capitals/Districts/Block/Panchayat levels.

6. As regards holding of "At Home" reception at Raj Bhawan/Raj Niwas by the Governor/Lt. Governor on the Independence Day, the matter is left to the discretion of Governors/Lt. Governors. However, in view of Covid-19 pandemic, preventive measures such as maintaining social distancing, wearing of masks, proper

sanitization, avoiding large congregations, protecting vulnerable groups, etc., and other measures as prescribed and recommended by the Ministry of Health & Family Welfare, are followed. It would be appropriate that Covid-19 warriors like doctors, health workers, sanitation workers, etc., are invited in the ceremony as a recognition of their noble service in fight against Covid-19 Pandemic. Some persons cured from Covid-19 infection may also be invited.

7. Performance of Police/Military bands may be recorded at places of historic importance associated with Independence movement; and recorded versions thereof may be displayed through large screens/digital media, during public functions and on social media.

8. Other functions of the day may include activities like planting of trees; inter-school/inter-college debates on digital platforms; online quiz contests/patriotic essay writing and poetry competitions; launching of any important scheme, singing patriotic songs/delivering patriotic talks by selected boys/girls on the social media; illumination of Government Buildings/State Bhawans, etc; thematic webinars; online campaign by NSS and NYKS centred around patriotic themes; or any other activity deemed appropriate by the State Government/Union Territory Administration befitting the occasion. Other innovative ways of celebrating the Independence Day may be considered like propagating patriotic or national integration messages/songs through digital and social media platforms, sound shows/lighting of important public buildings, waving of National Flags by people at rooftops/balconies, etc.

9. It would be appropriate that the theme of "*Aatmanirbhar Bharat*" is suitably spread and publicised amongst the masses through various activities/messages in the functions and on social media during Independence Day celebrations.

Yours faithfully,

[ANUJ SHARMA]
Joint Secretary
Tel: 011-23092436